ಅನೇಕ ಜನ ಅದನ್ನು ಸುಲಭದಲ್ಲಿ ಸ್ವೀಕರಿಸುವುದಿಲ್ಲ.

ಅಶೋಕವನದಲ್ಲಿ ಬಂಧಿಸಿಟ್ಟ ಸೀತೆಯನ್ನು ನೋಡಲು ತನ್ನ ರಾಜನ ವೇಷ ಕಳಚಿಟ್ಟು ಸನ್ಯಾಸಿಯ ರೂಪದಲ್ಲಿ ಹೋಗುವ ರಾವಣ, 'ಒರಟಾದ ಬೂದಿ ಈ ದೇಹಕ್ಕೆ ಚಂದನದ ಲೇಪವಾಯ್ತು. ಇದಕ್ಕೆ ಹೊಂದಿದ ಯಜ್ಞಸೂತ್ರವೇ ಹಾರವಾಯಿತು, ಸಿಕ್ಕು ಜಡೆಗಳೇ ಸೊಬಗಿನ ಹೆಳಲುಗಳಾದವು, ರುದ್ರಾಕ್ಷಿಗಳಿಂದಲೇ ರನ್ನದ ಬಳೆಯಾಯಿತು... ಹೀಗೆ, ಅಹೋ, ಕಾಮಿಯಾದ ನನ್ನ ಮೈ ಸೀತೆಯ ಕಣ್ಸೆಳೆಯುವಂತೆ ಚೆಲುವಾಗಿ ಅಣಿಯಾಯಿತು' ಎನ್ನುತ್ತ ತನ್ನ ಪರಿಸ್ಥಿತಿಯನ್ನು ತಾನೇ ಅಪಹಾಸ್ಯ ಮಾಡಿಕೊಳ್ಳುವ ಸನ್ನಿವೇಶವನ್ನು ಆತ್ಮಸ್ಥ ಹಾಸ್ಯಕ್ಕೆ ಉದಾಹರಣೆಯಾಗಿ 'ದಶರೂಪಕ'ದಲ್ಲಿ ನೀಡಲಾಗಿದೆ. ಆದರೆ ಅದು ಕವಿಯೊಬ್ಬನ ಕಲ್ಪನೆ ಹಾಗೂ ದೃಷ್ಟಾಂತಕ್ಕೆಂದು ಬಳಸಿಕೊಂಡ ಸಾಲುಗಳಷ್ಟೇ. ಈ ರಾವಣೋಕ್ತಿಗೆ ಆಕರ ಯಾವುದೆಂಬುದೂ ಸ್ಪಷ್ಟವಿಲ್ಲ. ಆದರೆ ನಿಜ ಜೀವನದಲ್ಲಿ ತಮ್ಮ ಆಕಾರದ ಬಗ್ಗೆಯಾಗಲೀ ದೌರ್ಬಲ್ಯದ ಕುರಿತಾಗಲೀ ಸಾರ್ವತ್ರಿಕವಾಗಿ ತಾವೇ ಆಡಿಕೊಂಡು ನಗುವ ಗಣ್ಯರು ಸಿಗುವುದು ಅಪರೂಪ.

'ಎಷ್ಟೋ ಜನರ ಹೆಸರಿಗೂ ಅವರ ರೂಪಕ್ಕೂ ಸಂಬಂಧವೇ ಇರುವುದಿಲ್ಲ. ಕೃಷ್ಣ ಅನ್ನುವ ಹೆಸರಿನವನು ಬಿಳಿಯಿರುತ್ತಾನೆ. ಮೌನೇಶ ವಾಚಾಳಿಯಾಗಿರುತ್ತಾನೆ. ಹೆಸರಿಗೂ ಆಕೃತಿಗೂ ನೇರ ತಾಳೆಯಾಗುವವನು ನಾನೊಬ್ಬನೇ ಇರಬೇಕು' ಎಂದು ಡಿ.ವಿ. ಗುಂಡಪ್ಪನವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಬರೆದುಕೊಂಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಅಪರಿಮಿತ ಸಾಧನೆಗೈದು, ಮೈಸೂರು ಅರಸರಿಂದ 'ಟೈಗರ್' ಎಂಬ ಬಿರುದು ಪಡೆದ ವರದಾಚಾರ್ಯರು, ಆ ಬಿರುದನ್ನು ತಮ್ಮ ರೂಪದೊಂದಿಗೆ ಗೇಲಿ ಮಾಡಿಕೊಳ್ಳುತ್ತ, 'ಬರೀ ಟೈಗರ್ ಯಾಕೆ, ನಾನು ಟೈಗರ್–ಲಯನ್ ವರದಾಚಾರ್' ಎನ್ನುತ್ತ ನಗುತ್ತಿದ್ದರಂತೆ. ಇವೆಲ್ಲ ಎಷ್ಟು ಜನರಿಗೆ ಸಾಧ್ಯ? ಕ್ಯಾಮೆರಾದ ಮುಂದೆ, ವೇದಿಕೆಯ ಮೇಲೆ ತಮ್ಮನ್ನೇ ತಾವು ನಿಂದಿಸಿಕೊಂಡು ಶ್ರೋತೃಗಳನ್ನು ನಗಿಸುವ ಅನೇಕರು, ಅದೇ ಚೇಷ್ಟೆಯನ್ನು ಯಾರಾದರೂ ತಮಗೆ ವೈಯಕ್ತಿಕವಾಗಿ ಮಾಡಿದರೆ ಸಹಿಸಿಯಾರೇ ಎಂಬುದು ಪ್ರಶ್ನೆ.

ಅದೇನೆಂದರೆ, ತಮ್ಮನ್ನು ತಾವೇ ಲೇವಡಿಗೆ ಒಳಪಡಿಸಿಕೊಳ್ಳುವ ವ್ಯಕ್ತಿಗೆ ಆ ಹಾಸ್ಯದಿಂದ ತನ್ನನ್ನು ಹೊರಗಿಟ್ಟುಕೊಂಡು ನೋಡುವ ಕಲೆ ಒಲಿದಿರಬೇಕು. ಆತನಲ್ಲೊಂದು ತಾತ್ಕಾಲಿಕ ತಾಳ್ಮೆಯೂ ವಿಶಿಷ್ಟ ಸಜ್ಜನಿಕೆಯೂ ಅಂತರ್ಗತವಾಗಿರಬೇಕು. ಆ ಕ್ಷಣಕ್ಕಾದರೂ ತನ್ನ ಸ್ವಪ್ರತಿಷ್ಠೆ ಹಮ್ಮುಗಳನ್ನು ಬದಿಗಿಟ್ಟು ಇತರರಲ್ಲೊಬ್ಬನಾಗಿ ಹಾಸ್ಯ ಸವಿಯುವುದು ಸಾಧ್ಯವಾಗಬೇಕು. ಈ ಗುಣ ಎಲ್ಲರಿಗೂ ಸಿದ್ಧಿಸಿರಲು ಸಾಧ್ಯವಿಲ್ಲ. ಹೀಗಾಗಿಯೇ ಜನಸಾಮಾನ್ಯರನ್ನೂ ಸೇರಿದಂತೆ ಸಾರ್ವಜನಿಕ ಕ್ಷೇತ್ರದಲ್ಲಿರುವ ಹಲವು ಪ್ರಮುಖರು, ಸೆಲೆಬ್ರಿಟಿಗಳು, ನಾಯಕರು ತಮ್ಮ ಮೇಲಿನ ಹಾಸ್ಯವನ್ನು ಸಹಿಸಲಾರರು.

***

ಕೊನೆಯಲ್ಲಿ – ಈ ಸುಭಾಷಿತವನ್ನೊಮ್ಮೆ ನೋಡಿ:

ಅಸಾರೇ ಖಲು ಸಂಸಾರೇ ಸಾರಂ
ಶ್ವಶುರಮಂದಿರಮ್
ಹರೋ ಹಿಮಾಲಯೇ ಶೇತೇ ವಿಷ್ಣುಃ ಶೇತೇ
ಮಹೋದಧೌ

'ನೀರಸವಾದ ಈ ಜಗತ್ತಿನಲ್ಲಿ ಸಾರಭರಿತವಾಗಿರುವುದೆಂದರೆ ಹೆಣ್ಣು ಕೊಟ್ಟ ಮಾವನ ಮನೆಯೊಂದೇ. ಆದ್ದರಿಂದಲೇ ಶಿವನು ಹಿಮಾಲಯದಲ್ಲಿ ನೆಲೆಸಿದ್ದಾನೆ, ವಿಷ್ಣುವು ಕ್ಷೀರ ಸಾಗರದಲ್ಲಿ ಬೀಡುಬಿಟ್ಟಿದ್ದಾನೆ' (ಪಾರ್ವತಿ ಹಿಮವಂತನ ಮಗಳು ಹಾಗೂ ಲಕ್ಷ್ಮಿ ಸಮುದ್ರರಾಜನ ಪುತ್ರಿ) ಎನ್ನುವ ಅರ್ಥದ, ದೇವರನ್ನು ಇದಕ್ಕಿಂತಲೂ ತೀಕ್ಷ್ಣವಾಗಿ ಕುಚೋದ್ಯ ಮಾಡುವ ಸುಭಾಷಿತಗಳು ಹುಡುಕಿದರೆ ನೂರಾರು ಸಿಕ್ಕಾವು. ಅಂದರೆ ದೇವರ ಬಗ್ಗೆ ತಮಾಷೆ ಮಾಡಿ ನಗುವ ನಮ್ಮ ವರಸೆ ಇತ್ತೀಚಿನದೇನೂ ಅಲ್ಲ. ಅದು ಅನಾದಿಕಾಲದಿಂದಲೂ ನಡೆದುಕೊಂಡೇ ಬಂದಿದೆ. ನಾವು ದೇವರನ್ನು ಅಪಹಾಸ್ಯವಾಡುವುದಕ್ಕಾಗಲೀ, ನಿಂದಿಸುವುದಕ್ಕಾಗಲೀ ಕಾರಣ ಆತ ಇದಾವುದಕ್ಕೂ ಮುನಿಸಿಕೊಳ್ಳುವುದಿಲ್ಲ ಎಂಬ ಅರಿವು ಹಾಗೂ ವಿಶ್ವಾಸ ಇರುವುದಕ್ಕೇ ತಾನೆ? ಆದರೆ ನಮ್ಮ ಮೇಲೆ ಯಾರಾದರೂ ವ್ಯಂಗ್ಯವಾಡಿದರೆ ಮಾತ್ರ ಮುನಿಸಿಕೊಳ್ಳುವುದೇಕೆ? ●